ಸ್ಪೇಷಲ್ ಕೇಸ್ ನಂ.518/2025

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

**ದಿನಾಂಕಃ 29.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

17. ಈ ಪ್ರಕರಣದಲ್ಲಿ ಜಪ್ತಾದ ವಸ್ತುಗಳನ್ನು ತೋರಿಸಿದರೆ ಗುರುತಿಸುತ್ತೇನೆಂದು ಹೇಳುತ್ತಾರೆ. ಈಗಾಗಲೇ ಮು.ಮಾ. 2 ಎಂದು ಗುರುತಾದ 500/– ಮುಖಬೆಲೆಯ 1 ನೋಟು, 100/– ಮುಖಬೆಲೆಯ 3 ನೋಟು, 50/– ಮುಖಬೆಲೆಯ 1 ನೋಟು, 20/– ಮುಖಬೆಲೆಯ 3 ನೋಟುಗಳು ಇದ್ದು ಒಟ್ಟು ರೂ.910/– ನಗದು ಹಣ ನೋಡಿ ಗುರುತಿಸುತ್ತಾರೆ.

18. ಈಗಾಗಲೇ ನಿಪಿಃ 21 ಎಂದು ಗುರುತಾದ ಸಿಡಿಯನ್ನು ಮುಕ್ತ ನ್ಯಾಯಾಲಯದಲ್ಲಿ ಪ್ರದರ್ಶಿಸಿದ್ದು ಅದನ್ನು ನೋಡಿ ಮೊದಲು ಠಾಣೆಯಲ್ಲಿ ನಾನು ನನಗೆ ಬಂದ ಬಾತ್ಮೀಯ ವಿವರಗಳನ್ನು ಪಂಚರು, ಪತ್ರಾಂಕಿತ ಅಧಿಕಾರಿ ಹಾಗೂ ನನ್ನ ಸಿಬ್ಬಂದಿಗಳಿಗೆ ವಿವರಿಸಿದ್ದು, ಆ ಕಾಲಕ್ಕೆ ನಮ್ಮಗಳ ಬಳಿ ಯಾವುದೇ ಮಾದಕ ವಸ್ತು ಇಲ್ಲ ಎಂಬುದನ್ನು ಸ್ವಯಂ ಶೋಧನಾ ಮಾಡಿಕೊಂಡು ಠಾಣೆಯಿಂದ ಎರಡು ಸರ್ಕಾರಿ ಜೀಪಗಳಲ್ಲಿ ಹೊರಟು ನಂತರ ಬಾತ್ಮೀ ಬಂದ ಸ್ಥಳಕ್ಕೆ ಹೋಗಿ ಅಲ್ಲಿ ದೂರದಲ್ಲಿ ನಿಂತು ನೋಡಿದಾಗ ಬಾತ್ಮೀ ಬಂದಂತೆ ಇಬ್ಬರು ವ್ಯಕ್ತಿಗಳು ಅಲ್ಲಿ ನಿಂತಿದ್ದರಿಂದ ಅವರುಗಳನ್ನು ನಮ್ಮ ಸಿಬ್ಬಂದಿಯ ಮೂಲಕ ಹಿಡಿಸಿ ಅವರಿಗೆ ಬಾತ್ಮೀ ಮಾಹಿತಿ ಬಗ್ಗೆ ತಿಳಿಸಿ ಅವರುಗಳ ಬಗ್ಗೆ ವಿಚಾರಿಸಿ ಹೆಸರನ್ನು ತಿಳಿದುಕೊಂಡು ಅವರ ಬಳಿಯಿದ್ದ ಬ್ಯಾಗ್ ಗಳಲ್ಲಿ ಯಾವ ವಸ್ತು ಇದೆ ಎಂದು ಖಾತರಿಪಡಿಸಿಕೊಂಡು ನಂತರ ಅವರ ಬಳಿಯಿದ್ದ ವಸ್ತು ಗಾಂಜಾ ಎಂದು ತಿಳಿದ ಮೇಲೆ ಅವುಗಳನ್ನು ತೂಕ ಮಾಡಿ ಪಂಚನಾಮೆ ಬರೆದು ಜಪ್ತು ಮಾಡಿದ ಕಾಲಕ್ಕೆ ಮಾಡಿದ ವಿಡಿಯೋ ಚಿತ್ರೀಕರಣ ಇದೆ ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮಧ್ಯಾಹ್ನದ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಎಂ.ಎಲ್.ಐ. ವಕೀಲರಿಂದಃ**

19. ನನಗೆ ಬಂದ ಬಾತ್ಮೀ ಮಾಹಿತಿಯನ್ನು ನಾನು ಯಾವುದೇ ವೈಯಕ್ತಿಕ ದಿನಚರಿ ಪುಸ್ತಕದಲ್ಲಿ ನಮೂದು ಮಾಡಿರುವುದಿಲ್ಲ. ಆದರೆ ಈ ಬಗ್ಗೆ ಠಾಣಾ ಡೈರಿಯಲ್ಲಿ ನಮೂದಿಸಿರುತ್ತೇನೆ. ಠಾಣಾ ದಿನಚರಿಯಲ್ಲಿ ಆರೋಪಿಗಳ ಹೆಸರು ಹಾಗೂ ಅವರುಗಳು ಧರಿಸಿದ್ದ ಬಟ್ಟೆಯ ಬಗ್ಗೆ ಅಥವಾ ಬೇರೆ ಯಾವುದೇ ಚಹರಾ ಪಟ್ಟಿಯನ್ನು ನಮೂದಿಸಿರುವುದಿಲ್ಲ ಕಾರಣ ಮಾಹಿತಿ ಕೇವಲ ಯಾರೋ ಇಬ್ಬರು ಗಾಂಜಾವನ್ನು ಮಾರುತ್ತಿದ್ದಾರೆ ಎಂದಷ್ಟೇ ಬಂದಿತ್ತು. ಠಾಣೆಯಲ್ಲಿ ಸಿಸಿಟಿವಿಯನ್ನು ಅಳವಡಿಸಲಾಗಿದೆ ಎನ್ನುವುದು ಸರಿ. ಠಾಣೆಗೆ ಸರ್ಕಾರದಿಂದ ಪ್ರತ್ಯೇಕವಾಗಿ ತನಿಖಾ ಕಾಲಕ್ಕೆ ಫೋಟೋ ಹಾಗೂ ವಿಡಿಯೋ ಮಾಡಲು ಕ್ಯಾಮೆರಾ ನೀಡಿದ್ದಾರೆಂದರೆ ಸರಿ. ನನ್ನ ಮೇಲಾಧಿಕಾರಿಗೆ ಕಳುಹಿಸಿದ ಬಾತ್ಮೀಯ ಮಾಹಿತಿ ಹಾಗೂ ದಾಳಿ ಮಾಡಲು ಅನುಮತಿ ಕೋರಿದ ಪತ್ರದಲ್ಲಿ ನಮ್ಮ ಠಾಣಾ ಜಾವಕ ಸಂಖ್ಯೆಯನ್ನು ನಮೂದಿಸಿಲ್ಲ ಎಂದು ಸೂಚಿಸುವುದು ಸರಿ. ಸದರಿ ಮನವಿಯಲ್ಲಿ ಅದನ್ನು ಕಳುಹಿಸಿದ ಸಮಯವನ್ನು ಸಹ ನಮೂದಿಸಿಲ್ಲ ಎಂದರೆ ಸರಿ.

20. ಪಂಚರಿಗೆ, ಪತ್ರಾಂಕಿತ ಅಧಿಕಾರಿಗೆ ನೀಡಿದ ನೋಟೀಸ್ ಹಾಗೂ ಒಪ್ಪಿಗೆ ಪತ್ರಗಳಲ್ಲಿ ಅವುಗಳನ್ನು ನೀಡಿದ ಹಾಗೂ ಪಡೆದುಕೊಂಡ ಸಮಯ ನಮೂದಾಗಿಲ್ಲ ಎಂದರೆ ಸರಿ. ನಮ್ಮ ಠಾಣೆಗೆ ಒಟ್ಟು 60 ಸಿಬ್ಬಂದಿಗಳು ಇವೆ. ನಾನು ಠಾಣೆಯನ್ನು ಬಿಡುವ ಮುನ್ನ

ಠಾಣಾಧಿಕಾರಿಯಾಗಿ ಠಾಣೆಯಲ್ಲಿದ್ದವರಿಗೆ ಠಾಣಾ ದಿನಚರಿಯಲ್ಲಿ ಅಧಿಕಾರಿ ನೀಡಿ ಬಿಟ್ಟಿರುತ್ತೇನೆ.

21. ನಮ್ಮ ಠಾಣೆಯಿಂದ ಗುನ್ಹಾ ಸ್ಥಳ ಸುಮಾರು 2 ರಿಂದ ಎರಡುವರೆ ಕಿ.ಮೀ. ಅಂತರದಲ್ಲಿದೆ. ಘಟನಾ ಸ್ಥಳಕ್ಕೆ ಹೋಗುವ ಮುನ್ನ ಪಂಚರ ಸಮಕ್ಷಮ ನಮ್ಮ ಸರ್ಕಾರಿ ವಾಹನಗಳನ್ನು ಶೋಧನೆ ಮಾಡಿ ಆ ಬಗ್ಗೆ ಯಾವುದೇ ದಾಖಲೆಯನ್ನು ತಯಾರಿಸಿರುವುದಿಲ್ಲ. ನಿಪಿಃ 21 ವಿಡಿಯೋ ದೃಶ್ಯಾವಳಿಗಳಲ್ಲಿ ದಿನಾಂಕ ಹಾಗೂ ಸಮಯ ನಮೂದಿಸಿಲ್ಲ ಎನ್ನುವುದು ಸರಿಯಲ್ಲ. ಘಟನಾ ಸ್ಥಳ ಬೆಂಗಳೂರು ಮತ್ತು ಮುಂಬೈ ನಡುವಿನ ರಾಷ್ಟ್ರಿಯ ಹೆದ್ದಾರಿ ಎನ್ನುವುದು ಸರಿ. ಆರೋಪಿತರು ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು 150 ರಿಂದ 200 ಮೀ. ದೂರದಲ್ಲಿದ್ದರು. ರಸಾಯಿ ಹೊಟೇಲ್ ನಿಂದ ಗುನ್ಹಾ ಜಾಗ ಸುಮಾರು 200 ಮೀ. ಅಂತರದಲ್ಲಿತ್ತು. ನಾನು ಆರೋಪಿತರ ಅಂಗಶೋಧನೆಗೆ ಮುನ್ನ ನೋಟೀಸ್ ನೀಡಿರುತ್ತೇನೆ. ನಿಪಿಃ 21 ವಿಡಿಯೋ ದಾಳಿಗೆ ಮುನ್ನ ಹಾಗೂ ದಾಳಿಯ ಕಾಲಕ್ಕೆ ಮಾಡಿದ್ದು ಎನ್ನುವುದು ಸರಿ. ನಿಪಿಃ 21 ವಿಡಿಯೋ ದೃಶ್ಯಾವಳಿಗಳಲ್ಲಿ ನಾನು ಅಂಗಶೋಧನೆಗೆ ಮುಂಚೆ ಆರೋಪಿತರಿಗೆ ನೋಟೀಸ್ ನೀಡಿರುವುದಿಲ್ಲ ಎಂದರೆ ಅದನ್ನು ನಾನು ದೃಶ್ಯಾವಳಿಗಳಲ್ಲಿ ಗಮನಿಸಿರುವುದಿಲ್ಲ ಎಂದು ಹೇಳಿರುತ್ತಾರೆ. ಆರೋಪಿತರ ಅಂಗಶೋಧನೆಗೆ ಮುನ್ನ ಯಾವ ಅಧಿಕಾರಿಗಳ ಮುಂದೆ ಅಂಗಶೋಧನೆ ಮಾಡಬಹುದು ಎಂದು ಅಭಿಪ್ರಾಯ ಕೋಡಿ ನೋಟೀಸ್ ನೀಡಿಲ್ಲ ಎಂದು ಸೂಚಿಸುವುದು ಸರಿಯಲ್ಲ.

22. ನಿಪಿಃ 19 ರಲ್ಲಿ ನಗದು ಹಣ ರೂ.910/– ಗಳನ್ನು ಯಾವ ಆರೋಪಿಯಿಂದ ಜಪ್ತು ಮಾಡಿದ್ದು ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಜಪ್ತಾದ ನಗದು ನೋಟುಗಳ ಮುದ್ರಣದ ದಿನಾಂಕ ಹಾಗೂ ಅವುಗಳ ಸಂಖ್ಯೆಯನ್ನು ನಮೂದಿಸಿಲ್ಲ ಎಂದರೆ ಸರಿ. ಪಂಚನಾಮೆ ಕಾಲಕ್ಕೆ ನಮ್ಮ ಜೊತೆಯಲ್ಲಿ ಪ್ರಿಂಟರನ್ನು ತೆಗೆದುಕೊಂಡು ಹೋಗಿದ್ದೇವು. ಪ್ರಿಂಟರನ್ನು ತೆಗೆದುಕೊಂಡು ಹೋಗಿದ್ದೇವು ಎಂದು ಪಂಚನಾಮೆಯಲ್ಲಿ ನಮೂದಿಸಿಲ್ಲ ಎಂದು ಸೂಚಿಸುವುದು ಸರಿ. ಪಂಚನಾಮೆಯನ್ನು ಘಟನಾ ಸ್ಥಳದ ಪಕ್ಕದಲ್ಲೇ ಇರುವ ಒಂದು ಫ್ಯಾಕ್ಟರಿಯಲ್ಲಿ ಪ್ರಿಂಟ ಮಾಡಿಸಿರುತ್ತೇನೆ. ಅಲ್ಲೇ ಪಕ್ಕದಲ್ಲೆ ಫ್ಯಾಕ್ಟರಿಯಲ್ಲಿ ಪ್ರಿಂಟ ತೆಗೆಯುವ ಮುನ್ನ ಅವರಿಗೆ ಲಿಖಿತವಾಗಿ ನೋಟೀಸ್ ನೀಡಿ ಅನುಮತಿ

ಪಡೆದುಕೊಂಡಿರುವುದಿಲ್ಲ ಆದರೆ ಮೌಖಿಕವಾಗಿ ಹೇಳಿರುತ್ತೇನೆ. ಪಂಚನಾಮೆಯನ್ನು ನಾನು ಠಾಣೆಯಲ್ಲಿ ತಯಾರಿಸಿ ಸಹಿ ಪಡೆದಿದ್ದೇನೆಂದು ಸೂಚಿಸುವುದು ಸರಿಯಲ್ಲ. ದೂರನ್ನು ನಾನು ಘಟನಾ ಸ್ಥಳದಲ್ಲೇ ತಯಾರಿಸಿರುತ್ತೇನೆ. ಆ ದಿನ ಒಟ್ಟು 1380 ಗ್ರಾಂ ಗಾಂಜಾವನ್ನು ಸ್ಥಳದಿಂದ ಜಪ್ತು ಮಾಡಿರುತ್ತೇನೆ. ದೂರಿನಲ್ಲಿ ಗಾಂಜಾ 1 ಕೆ.ಜಿ. ಇದೆ ಎಂದಷ್ಟೇ ನಮೂದು ಮಾಡಿದೆ ಎಂದರೆ ಸರಿ. ಸಾಕ್ಷಿ ಹೇಳುತ್ತಾರೆ ಸದರಿ ದೂರನ್ನು ನಾನು ಆರೋಪಿತರ ಬಳಿಯಿದ್ದ ಗಾಂಜಾವನ್ನು ತೂಕ ಮಾಡಿದ ನಂತರ ನೀಡಿರುವುದಿಲ್ಲ ಆದರೆ ಸ್ಥಳದಲ್ಲಿ ಅವರನ್ನು ಹಿಡಿದುಕೊಂಡ ತಕ್ಷಣ ಅವರು ತಮ್ಮ ಬಳಿ 1 ಕೆ.ಜಿ.ಗಿಂತ ಹೆಚ್ಚು ಗಾಂಜಾ ಇದೆ ಎಂದು ಹೇಳಿದ್ದರಿಂದ ಆ ಆಧಾರದ ಮೇಲೆ ನಾನು ದೂರನ್ನು ತಯಾರಿಸಿ ಕೊಟ್ಟಿರುತ್ತೇನೆ. ದೂರನ್ನು ನಾನು ಮೊದಲು ತಯಾರು ಮಾಡಿರುತ್ತೇನೆ. ದೂರನ್ನು ಸ್ಥಳದಲ್ಲೇ ತಯಾರಿಸಿ ನಮ್ಮ ಠಾಣಾ ಪ್ರಿಂಟರನ್ನು ಅಲ್ಲೇ ಫ್ಯಾಕ್ಟರಿಯ ಶೆಡ್ ನಲ್ಲಿ ಬಳಸಿ ಪ್ರಿಂಟ ಮಾಡಿಸಿ ಕೊಟ್ಟಿರುತ್ತೇನೆ. ದೂರನ್ನು ನಾನೇ ತಯಾರು ಮಾಡಿರುತ್ತೇನೆ. ಆ ಕಾಲಕ್ಕೆ ನಾನು ಆ ಫ್ಯಾಕ್ಟರಿ ಮ್ಯಾನೇಜರ್ ಕ್ಯಾಬಿನಲ್ಲಿ ಕುಳಿತು ಮಾಡಿಸಿರುತ್ತೇನೆ. ನಿಪಿಃ 20 ಫೋಟೋದಲ್ಲಿ ಅವುಗಳನ್ನು ತೆಗೆದ ದಿನಾಂಕ ಹಾಗೂ ಸಮಯ ನಮೂದಿಲ್ಲ ಎಂದರೆ ಸರಿ.

23. ಆರೋಪಿತರಿಗೆ ಅವರ ಅಂಗಶೋಧನೆಯನ್ನು ಯಾರ ಮುಂದೆ ಮಾಡಬೇಕು ಎಂದು ನೋಟೀಸ್ ನೀಡಿದಾಗ ಅವರು ಪತ್ರಾಂಕಿತ ಅಧಿಕಾರಿಯ ಮುಂದೆ ಮಾಡಬಹುದು ಎಂದು ಹೇಳಿದ್ದರಿಂದ ಅವರ ಅಭಿಪ್ರಾಯದಂತೆ ಒಪ್ಪಿಗೆ ಪತ್ರ ಟೈಪ್ ಮಾಡಿಸಿ ಸಹಿ ಪಡೆದಿರುತ್ತೇನೆ. ಚಾಸಾಃ 4 ರವರು ಘಟನಾ ಸ್ಥಳಕ್ಕೆ ತಮ್ಮ ಹುದ್ದೆಯ ಮೊಹರನ್ನು ತಂದಿರಲಿಲ್ಲ ಎನ್ನುವುದು ಸರಿ. ಆರೋಪಿತರಿಗೆ ನೀಡಿದ ನೋಟೀಸ್ ನಲ್ಲಿ ಸಮಯ ನಮೂದು ಇಲ್ಲ ಎಂದರೆ ಸರಿ. ನಿಪಿಃ 17 ಮತ್ತು 18 ನ್ನು ಆರೋಪಿತರ ಅಂಗಶೋಧನೆಗೆ ಮುನ್ನ ನೀಡಿರುತ್ತೇನೆ. ಅದರಲ್ಲಿ ಸಮಯ ನಮೂದಾಗಿಲ್ಲ ಎನ್ನುವುದು ಸರಿ. ನಾನು ಘಟನಾ ಸ್ಥಳದಲ್ಲಿ ನಿಪಿಃ 17 ಮತ್ತು 18 ನ್ನು ಆರೋಪಿತರಿಗೆ ನೀಡೇ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿತರು ಅಮಾಯಕರಾಗಿದ್ದು ಅವರ ಮೇಲೆ ನಾನು ಗಾಂಜಾದಂತಹ ವಸ್ತುವನ್ನು ಜಪ್ತು ಮಾಡಿರುವುದಿಲ್ಲ ಆದ್ದರಿಂದ ಅವರುಗಳಿಂದ ಜಪ್ತು ಮಾಡಿದ ಗಾಂಜಾದ ನಿಖರ ಅಳತೆಯನ್ನು ನಮೂದಿಸಿ ಕಳುಹಿಸಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಈ ಪ್ರಕರಣದಲ್ಲಿ ಜಪ್ತಾದ ಮುದ್ದೆ ಮಾಲಿಗೂ ಆರೋಪಿತರಿಗೂ ಯಾವುದೇ

ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಠಾಣೆಯ ಅಂಕಿಸಂಖ್ಯೆಗೋಸ್ಕರ ಹಾಗೂ ನಮ್ಮ ಮೇಲಾಧಿಕಾರಿಗಳಿಗೆ ವರದಿ ನೀಡುವ ಉದ್ದೇಶದಿಂದ ಅಮಾಯಕರಾದ ಆರೋಪಿತರ ವಿರುದ್ಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದು ಸೂಚಿಸುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.